# ವಾರ್ತಾ ವಿಶ್ಲೇಷಣೆ

## "ಶಿಶುಪಾಲನ" ವಧೆ

ಮಕ್ಕಳನ್ನು ಮಕ್ಕಳಂತಿರಲು ಬಿಡದೆ ಅವರ ಮೇಲೆ ಎಲ್ಲ ರೀತಿಯ ಹೊರೆ ಹೊರಿಸುವ ಪ್ರವೃತ್ತಿ ಎಲ್ಲೆಲ್ಲಿಯೂ ಕಂಡುಬರುತ್ತಿದೆ. ಮಕ್ಕಳ ದುಡಿಮೆಯನ್ನು ನಾವು ಖಂಡಿಸುತ್ತೇವೆ. ಆದರೆ ಮಕ್ಕಳನ್ನು ಮುಕ್ತವಾಗಿರಲು ನಾವು ಬಿಡುವುದಿಲ್ಲ. ಶಿಶುವಿಹಾರದಿಂದಲೇ ಪ್ರಾರಂಭವಾಗುತ್ತದೆ ಅವರ ಮೇಲೆ ಹೇರುವ ಒತ್ತಡ. ಮಕ್ಕಳಂತೆ ಆಟವಾಡಿಕೊಂಡಿರಲು ಅವರಿಗೆ ಸಮಯವೇ ಇಲ್ಲ. ಆ ಚಿಕ್ಕ ವಯಸ್ಸಿನಲ್ಲಿಯೇ ಅವರು ಪುಸ್ತಕದ ರಾಶಿಯನ್ನು ಹೊರಬೇಕು, ಬುದ್ಧಿವೃದ್ಧಿಯ, ಸ್ಮೃತಿವೃದ್ಧಿಯ ಅನೇಕಾನೇಕ ಕ್ರಿಯೆಗಳಲ್ಲಿ ಅವರು ತೊಡಗಬೇಕು, ಅನೇಕ ಯಂತ್ರೋಪಕರಣಗಳನ್ನು ಅದಕ್ಕಾಗಿ ಅವರು ಉಪಯೋಗಿಸಬೇಕು, ಅನೇಕ ಕುಶಲತೆಗಳನ್ನು ಕಲಿತು ಮುಂದೆ ವೃತ್ತಿಸಾಮರ್ಥ್ಯವನ್ನು ಪಡೆಯಲು (career building) ಅವರು ಆಗಲೇ ಕಾರ್ಯೋನ್ಮುಖರಾಗಬೇಕು, ತಮ್ಮ ಪ್ರತಿಭೆಯನ್ನು ಹೆಚ್ಚಿಸಿ ಕೊಳ್ಳಲು ಸಂಗೀತವನ್ನು ಕೇಳುವುದು, ವಿವಿಧ ಭಾಷೆಗಳನ್ನು ಕಲಿಯುವುದು ಮುಂತಾದುವುಗಳನ್ನು ಮಾಡಬೇಕು. ಇತ್ತೀಚೆಗೆ ಯೋಗಾಸನಗಳೂ ಇವುಗಳ ಜೊತೆಗೆ ಸೇರಿಕೊಳ್ಳುತ್ತಿವೆ.

ಆದರೆ ಇತ್ತೀಚಿನ ಸಂಶೋಧನೆಗಳು ಈ ಎಲ್ಲ ಒತ್ತಡಗಳಿಂದ ಮಕ್ಕಳ ಬುದ್ಧಿಶಕ್ತಿಯನ್ನಾಗಲಿ ಕುಶಲತೆಯನ್ನಾಗಲಿ ವೃದ್ಧಿಸಲಾಗುವುದಿಲ್ಲ ಎಂದು ತಿಳಿಸುತ್ತಿವೆ. ಈ ಎಲ್ಲ ಒತ್ತಡಗಳಿಂದ ಮಕ್ಕಳು ವಯಸ್ಕರಂತೆಯೇ ನರಬಿಗಿತಗಳಿಗೆ ಒಳಗಾಗಿ ಅವರ ಪ್ರಗತಿ ಇನ್ನೂ ಕುಂಠಿತವಾಗುತ್ತದೆ. ಈ ಜಡ ಉಪಕರಣಗಳಿಂದ ಮಕ್ಕಳನ್ನು ಉತ್ತಮರನ್ನಾಗಿ ಮಾಡಲಾಗುವುದಿಲ್ಲ, ಅದರ ಬದಲು ಅವರೊಡನೆ ಮಾತನಾಡುವುದು, ಅವರಿಗೆ ಓದಿ ಹೇಳುವುದು ಮುಂತಾದ ಭಾವನಾತ್ಮಕ ಕ್ರಿಯೆಗಳು ಅವರು ತಮ್ಮ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ವ್ಯಕ್ತಪಡಿಸಲು ಪೂರಕವಾಗುತ್ತವೆ ಎಂದು ವಿಶೇಷಜ್ಞರು ಹೇಳುತ್ತಾರೆ. ತಂದೆ ತಾಯಿಗಳೊಡನೆ ಸುರಕ್ಷಿತವಾದ ವಿಶ್ವಾಸಾರ್ಹವಾದ ಸಂಬಂಧದಿಂದ ಮಕ್ಕಳ ಬುದ್ಧಿಶಕ್ತಿಯನ್ನು ವೃದ್ಧಿಸಬಹುದು ಎಂಬುದು ಅವರ ಅಭಿಪ್ರಾಯ. ಮಕ್ಕಳನ್ನು ಮುದ್ದಿಸುವುದು, ಅವರೊಡನೆ ಆಡುವುದು, ಅವರ ಕಡೆ ಗಮನ ಹರಿಸುವುದು ಮುಂತಾದುವುಗಳು ಮಕ್ಕಳ ಬೆಳವಣಿಗೆಯಲ್ಲಿ ಬಹು ಮುಖ್ಯಪಾತ್ರ ವಹಿಸುತ್ತವೆ. "ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ನಾವು ಕಟ್ಟಕಡೆಯ ಸ್ಥಾನವನ್ನು ಕೊಟ್ಟೆವು. ಇದರಿಂದ ಮಕ್ಕಳಿಗೂ ಸಮಾಜಕ್ಕೂ ಅತಿದೊಡ್ಡ ಹಾನಿಯುಂಟಾಗಿದೆ." — ಎನ್ನುತ್ತಾರೆ ಪೀಡಿಯಾಟ್ರಿಕ್ಸ್ (Pediatrics)ಪ್ರೊಫೆಸರ್ ರ್‍ಯಾಚೇಲ್ ಟೈಲರ್ (Rachelle Tyler). ನಾವು ನಿಜವಾದ ಶಿಶು ಪಾಲನೆಯ ವಿಧಾನವನ್ನೇ ಸಂಪೂರ್ಣ ಕಡೆಗಣಿಸಿ ಆ ಕೆಲಸವನ್ನು ಯಂತ್ರಗಳಿಗೆ ವಹಿಸಿಬಿಟ್ಟಿದ್ದೇವೆ.

ಯಂತ್ರಗಳ ಮೂಲಕ ಬುದ್ಧಿಶಕ್ತಿಯನ್ನು ತಾತ್ಕಾಲಿಕವಾಗಿ ಚುರುಕುಗೊಳಿಸಬಹುದು. ಆದರೆ ಶಾಶ್ವತ ಪರಿಣಾಮ ಉಂಟಾಗುವುದು ಮಾನವೀಯ ಸಂಬಂಧಗಳ ಮೂಲಕ. ಮಕ್ಕಳಾಭಿವೃದ್ಧಿಯ ವಿಶೇಷಜ್ಞರಾದ ಟಿ. ಬೆರ್ರಿ ಬ್ರ್ಯಾಜೆಲ್‌ಟನ್ (Berry Brazelton) ಹೇಳುತ್ತಾರೆ: "ಬುದ್ಧಿಶಕ್ತಿಯು ಭಾವನಾತ್ಮಕ ಸಮರ್ಪಕತೆಯನ್ನು ಅವಲಂಬಿಸಿದೆ. ಭಾವನಾತ್ಮಕ ಬುದ್ಧಿಶಕ್ತಿ(emotional intelligence) ಎಂಬ ಪರಿಕಲ್ಪನೆ ಇದರ ಮೂಲದಲ್ಲಿದೆ."

ಶಾಲೆಯಲ್ಲಿ ಮಕ್ಕಳ ಕಲಿಕೆಯ ಸಾಮರ್ಥ್ಯವು ಪರಸ್ಪರ ಮಾನವೀಯ ಸಂಬಂಧವನ್ನು ಅವಲಂಬಿಸಿರುತ್ತದೆ ಎನ್ನುವುದು ನಿಜವಾದರೆ ತಂದೆತಾಯಿಯರೆ ಅತ್ಯುತ್ತಮ ಬೋಧಕರು ಎಂಬುದು ಸತ್ಯಸ್ಯ ಸತ್ಯ. **ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ** | (ಮಗುವಿಗೆ ಬೋಧಿಸದ ತಂದೆತಾಯಿಯರು ಪರಮ ಶತ್ರುಗಳು) ಎಂಬ ಸಂಸ್ಕೃತ ಹೇಳಿಕೆ ಇದೆ.

ಇಂದು ಮನೆಗಳಲ್ಲಿ ಮಕ್ಕಳಾಟವೇ ಇಲ್ಲವಾಗುತ್ತಿದೆ. ಅಧ್ಯಯನದ ಒತ್ತಡ, ಟಿ.ವಿ ವೀಕ್ಷಣೆ—ಇವುಗಳಲ್ಲೇ ಸಮಯ ಹೋಗುತ್ತಿದೆ. ಇದರಿಂದ ಮಾನಸಿಕ ಒತ್ತಡ ಅವರ ಮೇಲೆ ಅಧಿಕವಾಗುತ್ತಿದೆ. ಆಟವಾಡುವ ಪ್ರವೃತ್ತಿಯಿಲ್ಲದಿರುವುದರಿಂದ ದೈಹಿಕವಾಗಿಯೂ ಅವರಿಗೆ ಕೆಡುಕುಂಟಾಗುತ್ತಿದೆ ಮತ್ತು ಜೀವನವನ್ನು ಒಂದು ಲೀಲೆ (sportive)ಆಗಿ ಸ್ವೀಕರಿಸುವ ಮನೋಭಾವವನ್ನೂ ಅವರು ರೂಢಿಸಿಕೊಳ್ಳಲಾರರು. ಇದರಿಂದ ಜೀವನದ ಸವಾಲನ್ನು ಎದುರಿಸುವ ಸಾಮರ್ಥ್ಯವನ್ನು ಅವರು ಕಳೆದುಕೊಳ್ಳುತ್ತಾರೆ. ಮುಂದೆ ಅವರಿಗೆ ಜನರನ್ನು ದೋಚುವುದು, ಅವರನ್ನು ಹಿಂಸಿಸುವುದು, ಕೊಲ್ಲುವುದು—ಇವೇ "ಮಕ್ಕಳಾಟ"ವಾಗುತ್ತದೆ. ಹೀಗೆ ಸರಿಯಾಗಿ ಶಿಶು ಪಾಲನೆ ಇಲ್ಲದಿದ್ದರೆ, ಅಂದರೆ "ಶಿಶುಪಾಲನ" ವಧೆಯಾದರೆ ಸಮಾಜಕಂಟಕರನ್ನು ನಿರ್ಮಿಸುತ್ತೇವೆ.

### ಆಶ್ರಮದ ವಿಶೇಷ ಕಾರ್ಯಕ್ರಮಗಳು

ಜನವರಿ 2002

| | | |
|---|---|---|
| 1 | ಮಂಗಳವಾರ | ಕಲ್ಪತರು ದಿವಸ |
| 5 | ಶನಿವಾರ | ಶ್ರೀಶಾರದಾದೇವಿ ಜಯಂತಿ |
| 9 | ಬುಧವಾರ | ಸ್ವಾಮಿ ಶಿವಾನಂದ ಜಯಂತಿ |
| 19 | ಶನಿವಾರ | ಸ್ವಾಮಿ ಶಾರದಾನಂದ ಜಯಂತಿ |
| 28 | ಸೋಮವಾರ | ಸ್ವಾಮಿ ತುರೀಯಾನಂದ ಜಯಂತಿ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ. ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ